ಸಾಕ್ಷಿಯನ್ನು ದಿಃ **22.10.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಸಂಖ್ಯೆ 2(ಎ) ಯಿಂದ (ಜಿ) ಮತ್ತು 4ನೇ ಪ್ರತಿವಾದಿ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ-**

ನನ್ನ ಗಂಡನ ಹೆಸರು ಶಂಕರೇಗೌಡ. ನನ್ನ ಗಂಡನ ಶಂಕರೇಗೌಡ ಎಂದು ದಾವೆಯಲ್ಲಿ ಬರೆಸಿದ್ದೇನೆ. ನಾನು ವಾದ ಪತ್ರದಲ್ಲಿ ನನ್ನ ಗಂಡನ ಹೆಸರನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಯಾಲಕ್ಕಿಗೌಡ ಎಂಬುವವರನ್ನು ಎರಡನೇ ಮದುವೆ ಆಗಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಪಟೇಲ ವೀರಭದ್ರೇಗೌಡ ಮತ್ತು ಸಣ್ಣತಮ್ಮೇಗೌಡರವರ ವಿರುದ್ಧ ಸಲ್ಲಿಸಿದ್ದೇನೆ. ಅವರನ್ನು ಹೊರತುಪಡಿಸಿ ಬೇರೆ ಯಾರ ವಿರುದ್ಧವೂ ದಾವೆ ಸಲ್ಲಿಸಿಲ್ಲ. ವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಇಬ್ಬರನ್ನು ಹೊರತುಪಡಿಸಿ ಬೇರೆ ಯಾರ

ಹೆಸರನ್ನು ದಾವೆಯಲ್ಲಿ ಬರೆಯಲಾಗಿದೆ ಎಂದು ಗೊತ್ತಿಲ್ಲ. ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಈ ದಾವೆಗೆ ಸಂಬಂಧಿಸಿದಂತೆ ಬೇರೆ ದಾಖಲೆಗಳು ಇಲ್ಲ. ಮೇಲೆ ಹೇಳಿದ ಪಟೇಲ ವೀರಭದ್ರೇಗೌಡ ಮತ್ತು ಸಣ್ಣತಮ್ಮೇಗೌಡ ನನಗೆ ಅಣ್ಣಂದಿರಾಗಬೇಕು. ನಾನು ಮತ್ತು ಅವರು ಸಹೋದರರು ಮತ್ತು ಸಹೋದರಿಯರು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಅಂತಹ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವ ಯಾವ ಸರ್ವೆ ನಂಬರ್ ಗಳ ಮೇಲೆ ದಾವೆ ಹಾಕಿದ್ದೇನೆ ಎಂದು ಸರಿಯಾಗಿ ಗೊತ್ತಿಲ್ಲ. ನಾನು 11 ಎಕರೆ ಜಮೀನಿಗೆ ದಾವೆ ಹಾಕಿದ್ದೇನೆ. ನಾನು 3 ಎಕರೆ 8 ಗುಂಟೆ ತೆಗೆದುಕೊಂಡಿದ್ದೇನೆ. ಸದರಿ 3 ಎಕರೆ 8 ಗುಂಟೆಯ ಸರ್ವೆ ನಂಬರ್ 99/1 ಎಂದರೆ ಸರಿ. ಸರ್ವೆ ನಂಬರ್ 99/1 ನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನಗೆ ಜಮೀನು ಬೇಕೆಂದು ಈ ದಾವೆ ಸಲ್ಲಿಸಿದ್ದೇನೆ. ಸರ್ವೆ ನಂಬರ್ 99/1 ನ್ನು ಈ ದಾವೆಯಲ್ಲಿ ಸೇರಿಸಲು ನನಗೆ ತೊಂದರೆ ಇರಲಿಲ್ಲ. ನನ್ನ ತಂದೆಯ ಆಸ್ತಿ ಒಟ್ಟು  11 ಎಕರೆ ಇದೆ. 11 ಎಕರೆಯನ್ನು ದಾವೆಯಲ್ಲಿ ಸೇರಿಸಿದ್ದೇನೆ. ನನ್ನ ತಂದೆ ಮತ್ತು ತಾತನಿಗೆ ಸೇರಿದ ಮನೆಯಿದೆ. ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸೇರಿಸಿದ್ದೇನೆ. ಮನೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣ ವೀರಭದ್ರೇಗೌಡ ಸರ್ವೆ ನಂಬರ್ 99/1 ನ್ನು ನಾನು ಮಾರಾಟ ಮಾಡಬಾರದು ಕೇವಲ ಅನುಭವಿಸಿಕೊಂಡು ಹೋಗಬೇಕೆಂದು ನನ್ನ ವಿರುದ್ಧ ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 461/2015 ನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾದ ನಂತರ ನನ್ನ ಅಣ್ಣ ವೀರಭದ್ರೇಗೌಡ ಮೇಲ್ಮನವಿ ಸಂಖ್ಯೆ 35/2024 ಸಲ್ಲಿಸಿದ್ದಾರೆ ಎಂದರೆ ಸರಿ. ಅದರಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೇನೆ ಎಂದರೆ ಸರಿ. ಈ ನ್ಯಾಯಾಲಯದಲ್ಲಿ ಮೇಲ್ಮನವಿ ಇದ್ದರೂ ಕೂಡ ನಾನು ಸರ್ವೆ ನಂಬರ್ 99/1 ರಲ್ಲಿ ಇರುವ

3 ಎಕರೆ 8 ಗುಂಟೆಯನ್ನು ಈಗ ಮಾರಾಟ ಮಾಡಲು ಪ್ರಯತ್ನಿಸಿದ್ದೇನೆ ಎಂದರೆ ಸರಿ. ಸದರಿ ಜಮೀನನ್ನು ಇಲ್ಲಿಯವರೆಗೆ ಮಾರಾಟ ಮಾಡಿಲ್ಲ ಮುಂದಕ್ಕೆ ಮಾರಾಟ ಮಾಡುತ್ತೇನೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ನಾನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಸರ್ವೆ ನಂಬರ್ 99/1 ಹಾಗೂ ನನ್ನ ತಂದೆಗೆ ಸೇರಿದ ಮನೆಯನ್ನು ದಾವೆಯಲ್ಲಿ ಸೇರಿಸದೆ ಇರುವ ಕಾರಣ ನಾನು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.